ಆ) ಸದರಿ ಕಾಮಗಾರಿ ಕೆಲಸವನ್ನು ಔಟ್‌ಡೋರ್ ಅರ್ಡ್ವರ್ಟೈಸಿಂಗ್ ಕಂಪನಿಗಳಿಗೆ 5 ವರ್ಷಗಳ ಗುತ್ತಿಗೆ ಆಧಾರದ ಮೇಲೆ ವಹಿಸಿ ಕಾರ್ಯಗತ ಮಾಡುವುದಾಗಿ ಘೋಷಿಸಿದ್ದು ನಿಜವಲ್ಲವೇ,

ಇ) ಹಾಗಿದ್ದಲ್ಲಿ ಈ ಕೆಲಸವನ್ನು ಯಾರಿಗೆ ವಹಿಸಲಾಗಿದೆ ಹಾಗೂ ಇದು ಕಾರ್ಯಗತವಾಗುವಲ್ಲಿ ತೆಗೆದುಕೊಂಡ ಕ್ರಮವೇನು,

ಈ) ಹಾಗಿಲ್ಲದಿದ್ದಲ್ಲಿ ಇದು ವಿಳಂಬವಾಗಲು ಕಾರಣವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಹತ್ತು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಿ ಕಾಮಗಾರಿಯನ್ನು ವಹಿಸಲು ಪ್ರಸ್ತಾವನೆ ಇದೆ

ಇ) ಬಿ ಬಿ ಎಂ ಪಿ ವತಿಯಿಂದ ಎಕ್ಸ್‌ಪ್ರೆಶನ್ ಆಫ್ ಇನ್‌ಟ್ರೆಸ್ಟ್ ಅನ್ನು ಜಾಹೀರಾತು ದಿನಾಂಕ 28–02–2007, 01–03–2007 ರಂತೆ ಕರೆಯಲಾಗಿರುತ್ತದೆ ಇಲ್ಲಿಯವರೆಗೆ 73 ಏಜೆನ್ಸಿಗಳು ಭಾಗವಹಿಸಿರುತ್ತಾರೆ ಸದರಿ ಏಜೆನ್ಸಿಗಳ ಪ್ರಸ್ತಾಪಗಳನ್ನು ಅರ್ಹತೆ ಮತ್ತು ಸಾಮರ್ಥ್ಯಗಳನ್ನು ಆಧರಿಸಿ ಮೌಲ್ಯನಿರ್ಣಯ ಮಾಡಲಾಗುತ್ತಿದೆ

ಈ) ಮೌಲ್ಯನಿರ್ಣಯ ಕಾರ್ಯ ಪ್ರಗತಿಯಲ್ಲಿದ್ದು ಯಾವುದೇ ವಿಳಂಬವಾಗಿರುವುದಿಲ್ಲ

1513 (2215) ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) – ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಿಗೆ ಸಂಸ್ಥೆಯ ಸುಳ್ಯ ಡಿಪೋ ಇಲ್ಲದೆ ಪುತ್ತೂರು ಡಿಪೋಗೆ ಹೊರೆಯಾಗಿ (ಕಾರ್ಯಭಾಹುಳ್ಯದ ಒತ್ತಡದ ಕಾರಣ) ಸದರಿ ಬಸ್ ಮಾರ್ಗದ ಸಂಚಾರಿ ಮಾರ್ಗಗಳು ಬಸ್‌ಗಳ ಕೊರತೆಯಿಂದ ತೊಂದರೆ ಅನಾನುಕೂಲ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಘಟಕವನ್ನು (ಡಿಪೋ) ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನಲ್ಲಿ ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ,

ಇ) ಅದೇ ರೀತಿ ಪುತ್ತೂರು ಬಸ್ಸು ನಿಲ್ದಾಣದ ತಂಗುದಾಣವನ್ನು ನಿರ್ಮಾಣ ಮಾಡುವ ಯೋಜನೆ ಯಾವ ಹಂತದಲ್ಲಿದೆ, ಇದಕ್ಕೆ ಅನುಮೋದನೆ ಸಿಕ್ಕಿದೆಯೇ, ಇಲ್ಲದಿದ್ದಲ್ಲಿ, ಕಾರಣಗಳೇನು, ತಂಗುದಾಣ ನಿರ್ಮಾಣದ ಅಂದಾಜು ವೆಚ್ಚ ಪಟ್ಟಿ ತಯಾರಾಗಿದೆಯೇ,

ಈ) ಹಾಗಿಲ್ಲದಿದ್ದಲ್ಲಿ, ಇದುವರೆಗೂ ಕಾಮಗಾರಿ ಕೆಲಸ ಆಗದಿರಲು ಕಾರಣಗಳೇನು?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ ಸುಳ್ಯದಲ್ಲಿ ಬಸ್ ಘಟಕ ನಿರ್ಮಿಸುವ ಯೋಜನೆ ಇರುತ್ತದೆ ಆದರೆ ಪುತ್ತೂರು ಘಟಕದ ಬಸ್ಸುಗಳ ಕೊರತೆಯಿಂದಾಗಿ ಸುಳ್ಯ ತಾಲ್ಲೂಕಿನ ವ್ಯಾಪ್ತಿಯಲ್ಲಿ ಸಾರಿಗೆ ಕಾರ್ಯಾಚರಣೆಯಲ್ಲಿ ವ್ಯತ್ಯಯ ಉಂಟಾಗುತ್ತಿಲ್ಲ

ಆ) ಹೌದು ಸುಳ್ಯದಲ್ಲಿ ಬಸ್ ಘಟಕ ನಿರ್ಮಿಸಲು ಉದ್ದೇಶಿಸಿದ್ದು, ನಿರ್ಮಾಣಕ್ಕಾಗಿ ನಿವೇಶನವನ್ನು ನಿಗಮದ ವಶಕ್ಕೆ ಪಡೆಯುವ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತದೆ

ಇ, ಈ) ಪುತ್ತೂರು ಬಸ್ ನಿಲ್ದಾಣವನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯಿದ್ದು, ಸಂಸ್ಥೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು

1514 (1493) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಜವಾಹರಲಾಲ್ ನೆಹರು ನಗರ ಪುನರುಜ್ಜೀವನ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ವಿದ್ಯುಚ್ಛಕ್ತಿ ಇಲಾಖೆ ಕಾಮಗಾರಿಗಳಾವುವು,